# ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

**ಕೇಂದ್ರ ಕಛೇರಿ, ಸಾರಿಗೆ ಸದನ, ಕಲಬುರಗಿ.**

ಸಂಖ್ಯೆ: ಈಕರಸಾ/ಕೇಕ/ನೇಮಕ/ನೇ-34/**18**/2020 ದಿನಾಂಕ: 03/01/2020

## ಜಾಹೀರಾತು ಸಂಖ್ಯೆ: 01/2020

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿ ಇರುವ ದರ್ಜೆ-3 ಮೇಲ್ವಿಚಾರಕೇತರ ವೃಂದದ **ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ** ಹುದ್ದೆಗಳನ್ನು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿ 1982 ಮತ್ತು ತದನಂತರದ ತಿದ್ದುಪಡಿ ಆದೇಶಗಳ ಅನುಸಾರ ಹಾಗೂ 371 (ಜೆ) ರನ್ವಯ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ (ಕರ್ನಾಟಕ ಸಾರ್ವಜನಿಕ ಉದ್ಯೋಗ ತಿದ್ದುಪಡಿ ಆದೇಶ 2013) ಅನುಸಾರ ನೇರ ನೇಮಕಾತಿಯ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ (ONLINE) ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ಆರಂಭದ ದಿನಾಂಕ: 06/01/2020 & ಕೊನೆಯ ದಿನಾಂಕ: 05/02/2020**

**ಅರ್ಜಿ ಸಲ್ಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ:**

www.nekrtcjobs.karnataka.gov.in ಅಥವಾ www.nekrtc.org/jobs

**ಅಭ್ಯರ್ಥಿಗಳು ಸಲ್ಲಿಸುವ ಎಲ್ಲಾ ದಾಖಲೆಗಳು/ಪ್ರಮಾಣಪತ್ರಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದುಕೊಂಡಿರತಕ್ಕದ್ದು ಮತ್ತು ಚಾಲ್ತಿಯಲ್ಲಿ ಇರತಕ್ಕದ್ದು ಹಾಗೂ ದಾಖಲಾತಿ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.**

ಸ್ಥಳೀಯ (ಹೈದ್ರಾಬಾದ ಕರ್ನಾಟಕ ಪ್ರದೇಶ) ಮತ್ತು ಮಿಕ್ಕುಳಿದ ವೃಂದಗಳ ರೋಸ್ಟರ್ ಅನುಸಾರ ಸದರಿ ಹುದ್ದೆಗಳ ವರ್ಗೀಕರಣ ಈ ಕೆಳಕಾಣಿಸಿದಂತಿರುತ್ತದೆ.

### ಹುದ್ದೆ: ಚಾಲಕ (ಸ್ಥಳೀಯ ವೃಂದ) (Local Cadre)

(ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (371ಜೆ))

| ವರ್ಗೀಕರಣ | ಪ.ಜಾ. | ಪ.ಪಂ. | ವರ್ಗ-1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 23 | 5 | 7 | 70 | 7 | 38 | 8 | 74 | **232** |
| ಸಾಮಾನ್ಯ ಹಿಂಬಾಕಿ | 56 | 4 | | | | | | | **60** |
| ಮಹಿಳಾ | 34 | 7 | 9 | 33 | 9 | 9 | 11 | 34 | **146** |
| ಗ್ರಾಮೀಣ | 25 | 5 | 7 | 25 | 7 | 7 | 9 | 85 | **170** |
| ಗ್ರಾಮೀಣ ಹಿಂಬಾಕಿ | 2 | 1 | | | | | | | **3** |
| ಮಾಜಿ ಸೈನಿಕ | 10 | 2 | 2 | 10 | 2 | 2 | 3 | 33 | **64** |
| ಕನ್ನಡ ಮಾಧ್ಯಮ | 5 | 1 | 1 | 5 | 1 | 1 | 1 | 17 | **32** |
| ಕ. ಮಾ. ಹಿಂಬಾಕಿ | 1 | | | | | | | | **1** |
| ಯೋಜನಾ ನಿರಾಶ್ರಿತ | 5 | 1 | 1 | 5 | 1 | 1 | 1 | 17 | **32** |
| ಒಟ್ಟು ಹುದ್ದೆಗಳು | **161** | **26** | **27** | **148** | **27** | **58** | **33** | **260** | **740** |

## ಹುದ್ದೆ: ಚಾಲಕ (ಮಿಕ್ಕುಳಿದ ವೃಂದ) (Residual Cadre)

| ವರ್ಗೀಕರಣ | ಪ.ಜಾ. | ಪ.ಪಂ. | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 7 | 2 | 3 | 7 | 3 | 3 | 3 | 21 | **49** |
| ಸಾಮಾನ್ಯ ಹಿಂಬಾಕಿ | | 1 | | | | | | | **1** |
| ಮಹಿಳಾ | 10 | 2 | 3 | 9 | 2 | 2 | 3 | 29 | **60** |
| ಗ್ರಾಮೀಣ | 7 | 2 | 2 | 7 | 2 | 2 | 2 | 23 | **47** |
| ಗ್ರಾಮೀಣ ಹಿಂಬಾಕಿ | 1 | 1 | | | | | | | **2** |
| ಮಾಜಿ ಸೈನಿಕ | 2 | | | 2 | | | | 9 | **13** |
| ಕನ್ನಡ ಮಾಧ್ಯಮ | 1 | | | 1 | | | | 4 | **6** |
| ಕ. ಮಾ. ಹಿಂಬಾಕಿ | 1 | | | | | | | | **1** |
| ಯೋಜನಾ ನಿರಾಶ್ರಿತ | 1 | | | 1 | | | | 4 | **6** |
| ಒಟ್ಟು ಹುದ್ದೆಗಳು | **30** | **8** | **8** | **27** | **7** | **7** | **8** | **90** | **185** |

## ಹುದ್ದೆ: ಚಾಲಕ–ಕಂ–ನಿರ್ವಾಹಕ (ಸ್ಥಳೀಯ ವೃಂದ) (Local Cadre)

(ಹೈದ್ರಾಬಾದ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗಾಗಿ (371ಜೆ))

| ವರ್ಗೀಕರಣ | ಪ.ಜಾ. | ಪ.ಪಂ. | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 17 | 3 | 4 | 17 | 4 | 44 | 6 | 54 | **149** |
| ಸಾಮಾನ್ಯ ಹಿಂಬಾಕಿ | 55 | 9 | | | | | | | **64** |
| ಮಹಿಳಾ | 24 | 6 | 7 | 24 | 7 | 7 | 8 | 40 | **123** |
| ಗ್ರಾಮೀಣ | 19 | 4 | 5 | 19 | 5 | 5 | 6 | 61 | **124** |
| ಗ್ರಾಮೀಣ ಹಿಂಬಾಕಿ | 3 | 1 | | | | | | | **4** |
| ಮಾಜಿ ಸೈನಿಕ | 7 | 1 | 2 | 7 | 2 | 1 | 2 | 24 | **46** |
| ಕನ್ನಡ ಮಾಧ್ಯಮ | 3 | 1 | 1 | 3 | 1 | 1 | 1 | 12 | **23** |
| ಯೋಜನಾ ನಿರಾಶ್ರಿತ | 3 | 0 | 1 | 3 | 1 | 1 | 1 | 12 | **22** |
| ಒಟ್ಟು ಹುದ್ದೆಗಳು | **131** | **25** | **20** | **73** | **20** | **59** | **24** | **203** | **555** |

## ಹುದ್ದೆ: ಚಾಲಕ–ಕಂ–ನಿರ್ವಾಹಕ (ಮಿಕ್ಕುಳಿದ ವೃಂದ) (Residual Cadre)

| ವರ್ಗೀಕರಣ | ಪ.ಜಾ. | ಪ.ಪಂ. | ವರ್ಗ–1 | 2ಎ | 2ಬಿ | 3ಎ | 3ಬಿ | ಸಾಮಾನ್ಯ | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ | 5 | 2 | 2 | 4 | 2 | 2 | 2 | 16 | **35** |
| ಸಾಮಾನ್ಯ ಹಿಂಬಾಕಿ | 3 | | | | | | | | **3** |
| ಮಹಿಳಾ | 7 | 1 | 2 | 7 | 2 | 2 | 2 | 22 | **45** |
| ಗ್ರಾಮೀಣ | 5 | 1 | 2 | 5 | 1 | 1 | 2 | 17 | **34** |
| ಗ್ರಾಮೀಣ ಹಿಂಬಾಕಿ | 2 | | | | | | | | **2** |
| ಮಾಜಿ ಸೈನಿಕ | 2 | 0 | 0 | 2 | 0 | 0 | 0 | 6 | **10** |
| ಕನ್ನಡ ಮಾಧ್ಯಮ | 1 | 0 | 0 | 1 | 0 | 0 | 0 | 3 | **5** |
| ಯೋಜನಾ ನಿರಾಶ್ರಿತ | 1 | 0 | 0 | 1 | 0 | 0 | 0 | 3 | **5** |
| ಒಟ್ಟು ಹುದ್ದೆಗಳು | **26** | **4** | **6** | **20** | **5** | **5** | **6** | **67** | **139** |

**ಟಿಪ್ಪಣಿ:**

1) ಆಯಾ ವರ್ಗದ ಸಮತಳ ಮೀಸಲಾತಿಯ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

2) ಈಕರಸಾ ಸಂಸ್ಥೆಯ ಜಾಹೀರಾತು ಸಂಖ್ಯೆ: 02/2014 ದಿನಾಂಕ: 21/07/2014 ರಲ್ಲಿ ಚಾಲಕ ಹುದ್ದೆಯ ಆಯ್ಕೆಗೆ 2ಎ ವರ್ಗ 47 & 3ಎ ವರ್ಗದ 31 ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಯ ಆಯ್ಕೆಗೆ 3ಎ ವರ್ಗದ 40 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯರಾಗಿಲ್ಲದ ಕಾರಣ ಸರ್ಕಾರದ ಆದೇಶದಂತೆ ಒಟ್ಟು 118 ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗಿದ್ದು, ಈ ಹುದ್ದೆಗಳನ್ನು ಮುಂದಿನ ನೇಮಕಾತಿಯಲ್ಲಿ ಸಾಮಾನ್ಯ ವರ್ಗದ ಹುದ್ದೆಗಳಿಂದ ಕಡಿತಗೊಳಿಸಿ ಭರ್ತಿ ಮಾಡಬೇಕಾಗಿರುತ್ತದೆ. ಅದರಂತೆ, ಪ್ರಸ್ತುತ ನೇಮಕಾತಿಯಲ್ಲಿ ಸಾಮಾನ್ಯ ವರ್ಗಕ್ಕೆ ಲಭ್ಯವಾಗುವ ಹುದ್ದೆಗಳಿಂದ ಮೇಲ್ಕಂಡ ಹುದ್ದೆಗಳನ್ನು ತತ್ಸಮಾನವಾಗಿ ಕಡಿತಗೊಳಿಸಿ ಆಯಾ ವರ್ಗಗಳಲ್ಲಿ ಪ್ರಸ್ತುತ ಲಭ್ಯವಾಗುವ ಹುದ್ದೆಗಳಿಗೆ ಸೇರಿಸುವ ಮೂಲಕ ಸರಿದೂಗಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

3) ಹಾಗೆಯೇ ಈಕರಸಾ ಸಂಸ್ಥೆಯ ಜಾಹೀರಾತು ಸಂಖ್ಯೆ 02/2014 ದಿನಾಂಕ: 21/07/2014 ರಲ್ಲಿ ಪರಿಶಿಷ್ಟ ಜಾತಿಯ ಹಾಗೂ ಪರಿಶಿಷ್ಟ ಪಂಗಡದ ಹುದ್ದೆಗಳ ಆಯ್ಕೆಗೆ ಅಭ್ಯರ್ಥಿಗಳ ಕೊರತೆಯಿಂದಾಗಿ ಉದ್ಭವವಾದ ಹಾಗೂ ಆಯ್ಕೆಯಾಗಿ ಹುದ್ದೆಯಲ್ಲಿ ಹಾಜರಾಗದ ಕಾರಣ ಬಾಕಿ ಉಳಿದಿರುವ ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ ಹುದ್ದೆಗಳ ಒಟ್ಟು 141 ಹಿಂಬಾಕಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

4) ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರನ್ವಯ ಸ್ಥಳೀಯ ವೃಂದ (Local Cadre) ಮತ್ತು ಮಿಕ್ಕುಳಿದ ವೃಂದ (Residual Cadre) ಗಳಿಗೆ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು, ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವಾಗ ಹುದ್ದೆಗಳ ಸಂಖ್ಯೆಗಳನ್ನು ಮಾರ್ಪಾಡುಗೊಳಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.

I. **ವಿದ್ಯಾರ್ಹತೆ** :

ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಅ. ತತ್ಸಮಾನ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಇಡಿ 73 ಎಸ್‌ಎಲ್‌ಬಿ 2006 ದಿನಾಂಕ:06-09-2006 ರಡಿಯಲ್ಲಿ ನೀಡಲಾದ ನಿರ್ದೇಶನಗಳಂತೆ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಎಸ್.ಎಸ್.ಎಲ್.ಸಿ.ಗೆ ತತ್ಸಮಾನ ಎಂದು ಅಂಕಪಟ್ಟಿಯಲ್ಲಿ ನಮೂದಿಸಿರುವುದನ್ನು ಮಾತ್ರ ಪರಿಗಣಿಸಲಾಗುವುದು.

ಆ. ಮುಕ್ತ ವಿಶ್ವವಿದ್ಯಾಲಯದಿಂದ ವಿತರಿಸಿರುವ ಹಾಗೂ ಗರಿಷ್ಠ 500 ಅಂಕಗಳ ಎಸ್.ಎಸ್.ಸಿ. ವಿದ್ಯಾರ್ಹತೆಯ ಅಂಕಪಟ್ಟಿಯನ್ನು ಪರಿಗಣಿಸಲಾಗುವುದಿಲ್ಲ.

ಇ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಮತ್ತು ಇತರೆ ಯಾವುದೇ ಸಂಘ ಸಂಸ್ಥೆ /ವಿಶ್ವವಿದ್ಯಾಲಯದಿಂದ ನಡೆಸಲಾಗುವ ಎಸ್‌ಎಸ್‌ಎಲ್‌ಸಿಗೆ ತತ್ಸಮಾನವೆಂದು ತಿಳಿಸಿ ಸಲ್ಲಿಸುವ ಬ್ರಿಡ್ಜ್ ಕೋರ್ಸ್ ಅಂಕಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

**ವಯೋಮಿತಿ :**

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಈ ಕೆಳಕಂಡಂತೆ ವಯೋಮಿತಿ ಹೊಂದಿರತಕ್ಕದ್ದು.

| ವರ್ಗ | ಕನಿಷ್ಠ ವಯಸ್ಸು (ಪೂರ್ಣಗೊಂಡಿರಬೇಕು) | ಗರಿಷ್ಠ (ಮೀರಿರಬಾರದು) |
|---|---|---|
| ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ | 24 ವರ್ಷ | 35 ವರ್ಷ |
| ಪ್ರವರ್ಗ 2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ | 24 ವರ್ಷ | 38 ವರ್ಷ |
| ಪ.ಜಾ/ಪ.ಪಂ/ಪ್ರವರ್ಗ-1 ಅಭ್ಯರ್ಥಿಗಳಿಗೆ | 24 ವರ್ಷ | 40 ವರ್ಷ |

II. **ಸಾರಿಗೆ ಸಂಸ್ಥೆಯ ಇಲಾಖಾ ಅಭ್ಯರ್ಥಿಗಳಿಗಾಗಿ.**

ಅ) ಇಲಾಖಾ ಅಭ್ಯರ್ಥಿಗಳಿಗೆ ಗರಿಷ್ಠ 10 ವರ್ಷಗಳಿಗೆ ಮೀರದಂತೆ ಅವರು ಈಕರಸಾ ಸಂಸ್ಥೆ ಅಥವಾ ಇತರೆ ಮಾತೃ/ಸಹೋದರ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ನೇಮಕಾತಿ ಹೊಂದಿ ಪರೀಕ್ಷಾರ್ಥ ಸೇವೆಯ ಮೇಲೆ ನಿಯೋಜಿಸಲ್ಪಟ್ಟ ದಿನಾಂಕದಿಂದ ಸೇವೆ ಸಲ್ಲಿಸಿದ ಪ್ರತಿ ವರ್ಷಕ್ಕೆ 1 ವರ್ಷ ವಯೋಮಿತಿಯಲ್ಲಿ ರಿಯಾಯಿತಿಯನ್ನು ನೀಡಲಾಗುವುದು. ಆದರೆ ಅವರ ವಯಸ್ಸು 45 ವರ್ಷಗಳಿಗೆ ಮೀರಿರಬಾರದು.

ಆ) ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸುವ ಇಲಾಖಾ ಅಭ್ಯರ್ಥಿಗಳು ವಯೋಮಿತಿ ವಿನಾಯಿತಿಯನ್ನು ಹೊರತುಪಡಿಸಿ ಉಳಿದೆಲ್ಲಾ ಷರತ್ತು ಮತ್ತು ಮಾನದಂಡಗಳ ವಿಷಯದಲ್ಲಿ ಇತರೆ ಅಭ್ಯರ್ಥಿಗಳೊಂದಿಗೆ ಸ್ಪರ್ಧಿಸಬೇಕಿರುತ್ತದೆ.

ಇ) KSRTC, BMTC, NWKRTC ಅಥವಾ NEKRTC ಯಲ್ಲಿ ಸೇವೆಯಲ್ಲಿರುವವರು: ಸಂಬಂಧಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಜಾಹೀರಾತಿನಲ್ಲಿ ಕರೆಯಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಪಡೆದ ನಿರಾಕ್ಷೇಪಣಾ ಹಾಗೂ ಸೇವಾ ಪ್ರಮಾಣ ಪತ್ರ ಕಡ್ಡಾಯವಾಗಿ ಮೂಲ ದಾಖಲಾತಿ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸುವುದು.

III. **ದೇಹದಾರ್ಢ್ಯತೆ:** ಅಭ್ಯರ್ಥಿಗಳು ಕನಿಷ್ಠ ಈ ಕೆಳಕಂಡ ದೇಹದಾರ್ಢ್ಯತೆ ಹೊಂದಿರಬೇಕು.

| ವಿವರ | ಎತ್ತರ | ತೂಕ |
|---|---|---|
| **ಪುರುಷರು** | 163cm | 55 kg |
| **ಮಹಿಳೆಯರು** | 153 cm | 50 kg |

IV. **ಚಾಲನಾ/ನಿರ್ವಾಹಕ ಪರವಾನಿಗೆ:**

1. **ಚಾಲಕ ಹುದ್ದೆಗೆ:**

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಪ್ರಯಾಣಿಕರ/ಸರಕು ಸಾಗಾಣಿಕೆ ಭಾರೀ ವಾಹನ ಚಾಲನಾ ಪರವಾನಿಗೆ ಹೊಂದಿ 2 ವರ್ಷ ಪೂರ್ಣಗೊಂಡಿರಬೇಕು. ಜೊತೆಗೆ, ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

2. **ಚಾಲಕ-ಕಂ-ನಿರ್ವಾಹಕ ಹುದ್ದೆಗೆ:**

ಅ) ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಪ್ರಯಾಣಿಕರ/ಸರಕು ಸಾಗಾಣಿಕೆ ಭಾರೀ ವಾಹನ ಚಾಲನಾ ಪರವಾನಿಗೆ ಹೊಂದಿ 2 ವರ್ಷ ಪೂರ್ಣಗೊಂಡಿರಬೇಕು. ಜೊತೆಗೆ, ಕರ್ನಾಟಕ ಬ್ಯಾಡ್ಜ್ ಹೊಂದಿರಬೇಕು.

ಆ) ಚಾಲ್ತಿಯಲ್ಲಿರುವ ಎಂ.ವ್ಹಿ. ನಿರ್ವಾಹಕ ಪರವಾನಿಗೆ ಹಾಗೂ ಬ್ಯಾಡ್ಜ್ ಹೊಂದಿರಬೇಕು.

V. **<u>ಮೀಸಲಾತಿಗಳು:</u>**

1) **<u>ಜಾತಿ / ಪ್ರವರ್ಗ ಮೀಸಲಾತಿ:</u>**

ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು, ಸಕ್ಷಮ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ರ ಅಭ್ಯರ್ಥಿಗಳನ್ನು ಹೊರತುಪಡಿಸಿ **ಇತರೇ ಪ್ರವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಗದಿತ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪಡೆದು ಸಲ್ಲಿಸತಕ್ಕದ್ದು**.

2) **<u>ಗ್ರಾಮೀಣ ಮೀಸಲಾತಿ:</u>**

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:08:ಸೆನೆನಿ:2001, ದಿನಾಂಕ: 13/02/2001 ಮತ್ತು ಸಂಖ್ಯೆ: ಸಿಆಸುಇ:96:ಸೆನೆನಿ:2005 ದಿನಾಂಕ:10/08/2005 ಗಳಂತೆ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ವಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಿರುತ್ತಾರೆ.

ಗ್ರಾಮೀಣ ಮೀಸಲಾತಿ ಕೋರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರ ಸಹಿ ಮತ್ತು ಮೊಹರು ಹೊಂದಿದ ಪ್ರಮಾಣ ಪತ್ರದ ಮೇಲೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯ ಮೇಲು ಸಹಿ ಹಾಗೂ ಮೊಹರು ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ ಮಾತ್ರ ಗ್ರಾಮೀಣ ಮೀಸಲಾತಿಗೆ ಅರ್ಹರಾಗುವರು.

**ಸಾಮಾನ್ಯ ವರ್ಗದ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿ ಪಡೆಯಲು** ಹೆಚ್ಚುವರಿಯಾಗಿ "ತಾವು ಮೇಲುಸ್ತರಕ್ಕೆ (Creamy Layer) ಸೇರಿರುವುದಿಲ್ಲ" ಎಂಬ ಬಗ್ಗೆ ಚಾಲ್ತಿಯಲ್ಲಿರುವ ಸಕ್ಷಮ ಪ್ರಾಧಿಕಾರಸ್ಥರಿಂದ ಪಡೆದ ಪ್ರಮಾಣ ಪತ್ರ ಹೊಂದಿರಬೇಕು.

VI. **<u>ಕನ್ನಡ ಮಾಧ್ಯಮ ಮೀಸಲಾತಿ:</u>**

ಅಭ್ಯರ್ಥಿಯು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ**/71/**ಸೆನೆನಿ**/2001,** ದಿನಾಂಕ:24/10/2002 ರನ್ವಯ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ಸಹಿ ಹಾಗೂ ಮೊಹರಿನೊಂದಿಗೆ ಪಡೆದ ಪ್ರಮಾಣ ಪತ್ರ ಹೊಂದಿದ್ದಲ್ಲಿ ಮಾತ್ರ ಕನ್ನಡ ಮಾಧ್ಯಮ ಮೀಸಲಾತಿಗೆ ಅರ್ಹರಿರುತ್ತಾರೆ.

VII. **<u>ಯೋಜನಾ ನಿರಾಶ್ರಿತರ ಮೀಸಲಾತಿ:</u>**

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ/23/ಸೆನೆನಿ/99, ದಿನಾಂಕ:23/11/2000 ರಲ್ಲಿ ಸೂಚಿಸಿರುವಂತೆ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರದಲ್ಲಿ ಯೋಜನೆಯಿಂದ ನಿರ್ವಸಿತರಾದ ಬಗ್ಗೆ ಯಾವುದಾದರೂ ಒಂದು ಐಟಂ ಸಂಪೂರ್ಣವಾಗಿ ಅನ್ವಯಿಸಿದಲ್ಲಿ ಮತ್ತು ಸದರಿ ನಮೂನೆಯನ್ನು ಸಮರ್ಪಕವಾಗಿ ಹಾಗೂ ಸಂಪೂರ್ಣವಾಗಿ ಭರ್ತಿ ಮಾಡಿದ ಪಕ್ಷದಲ್ಲಿ ಮಾತ್ರ ಯೋಜನಾ ನಿರಾಶ್ರಿತರ ಮೀಸಲಾತಿಗೆ ಅರ್ಹರಿರುತ್ತಾರೆ.

ಸರ್ಕಾರದ ಆದೇಶದನುಸಾರ ಈ ನಿಯಮ ಜಾರಿಗೆ ಬಂದ ದಿನಾಂಕಕ್ಕಿಂತ ಹಿಂದಕ್ಕೆ 20 ವರ್ಷಗಳ ಪೂರ್ವದಲ್ಲಿ ಅಥವಾ 20 ವರ್ಷಗಳ ಹಿಂದೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಂತಹ ಪ್ರಕರಣಗಳಲ್ಲಿ ಮೀಸಲಾತಿ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

VIII. **<u>ಮಾಜಿ ಸೈನಿಕ ಮೀಸಲಾತಿ:</u>**

ಮಾಜಿ ಸೈನಿಕರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪರಿಭಾಷೆಯನ್ನು ಹೊಂದಿರತಕ್ಕದ್ದು.

EX-SERVICEMEN, means a person, who has served in any rank (whether as a combatant or as a non-combatant) in the regular Army, Navy and Air Forces of the union but does not include a person who has served in Defense Security Corps, the General Reserve Engineering Force, the Lok Sahayak Sene and Para Military Forces and

a) Who has retired from such services earning his pension, or
b) Who has been released from such service on Medical Grounds attributable to military service or circumstances beyond his control and awarded medical or other disability pensions, or
c) Who has been released otherwise than on his own request from such service as a result of reduction in Establishment, or
d) Who has been released from such service after completing the specific period of engagement otherwise than at his own request or by way of dismissal or discharge on account of misconduct or inefficiency and has been given a gratuity and includes personnel of the Territorial Army of the following categories, namely;
   (i) Pension holders for continuous embodied service.
   (ii) Pension with disability attributable to military service; and
   (iii) Gallantry award winners

In respect of Ex-Servicemen, by three years plus by the number of years of service rendered by him in Armed Forces of the Union subject to the condition that the Ex-Servicemen shall not have completed 45 years of age.

IX. **<u>371 (ಜೆ) ಸ್ಥಳೀಯ ಅಭ್ಯರ್ಥಿ ಮೀಸಲಾತಿ:</u>**

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಾವಳಿಗಳ ಅನ್ವಯ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬೇಕಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಅರ್ಹತಾ ಪ್ರಮಾಣ ಪತ್ರವನ್ನು ಹೊಂದಿರಬೇಕು.

X. **<u>ಅರ್ಜಿಯನ್ನು ಸಲ್ಲಿಸುವ ವಿಧಾನ:</u>**

1) ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಈಕರಸಾ ಸಂಸ್ಥೆಯ ವೆಬ್‌ಸೈಟ್ ಮೂಲಕವೇ ಸಲ್ಲಿಸಬೇಕು.
2) ನಿಗದಿತ ಅವಧಿಯ ನಂತರ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
3) ಸಲ್ಲಿಸಿದ ಅರ್ಜಿಯನ್ನು ಯಾವುದೇ ಕಾರಣದಿಂದಲೂ ಆನ್‌ಲೈನ್‌ನಲ್ಲಿ ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.
4) ಅಭ್ಯರ್ಥಿಯು ಒಂದೇ ಅರ್ಜಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಒಂದು ವೇಳೆ ಒಂದಕ್ಕಿಂತ ಹೆಚ್ಚು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದಲ್ಲಿ, ಒಂದು ಬಾರಿ ಮಾತ್ರ ಚಾಲನಾ ಪರೀಕ್ಷೆಗೆ ಅವಕಾಶ ನೀಡಲಾಗುವುದು. ಅಲ್ಲದೇ, ಸಂಸ್ಥೆಯ ಗಮನಕ್ಕೆ ಬಾರದೇ ಅಭ್ಯರ್ಥಿಗೆ ಎರಡನೇಯ ಬಾರಿಗೆ ಚಾಲನಾ ಪರೀಕ್ಷೆ ನೀಡಿದಲ್ಲಿ, ಕೇವಲ **ಮೊದಲನೇ ಬಾರಿ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ಪರಿಗಣಿಸಲಾಗುವುದು**.
5) ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಿದಲ್ಲಿ ಮೊದಲು ಸಲ್ಲಿಸಿದ ಅರ್ಜಿಯ ನೊಂದಣಿ ಸಂಖ್ಯೆಯನ್ನು ನಂತರ ಸಲ್ಲಿಸುವ ಹುದ್ದೆಯ ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸುವುದು.
6) ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ತಕ್ಷಣ ನೊಂದಣಿ ಸಂಖ್ಯೆಯುಳ್ಳ ಅರ್ಜಿಯ ಮುದ್ರಿತ ಪ್ರತಿಯನ್ನು ತಮ್ಮ ಬಳಿ ಇಟ್ಟುಕೊಳ್ಳುವುದು ಹಾಗೂ ಮೂಲ ದಾಖಲಾತಿಗಳ ಪರಿಶೀಲನಾ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು. ತಪ್ಪಿದಲ್ಲಿ ಅಭ್ಯರ್ಥನವನ್ನು ತಿರಸ್ಕರಿಸಲಾಗುವುದು.

XI. **<u>ನಿಗದಿತ ಅರ್ಜಿ ಶುಲ್ಕ:</u>**

ಬ್ಯಾಕ್‌ಲಾಗ್ ಹುದ್ದೆಗಳು ಸೇರಿದಂತೆ, ಅಭ್ಯರ್ಥಿಯು ಅರ್ಜಿ ಸಲ್ಲಿಸಬಯಸುವ ಪ್ರತಿ ಹುದ್ದೆಗೆ ಪ್ರತ್ಯೇಕ ಶುಲ್ಕ ಪರಿಗಣಿಸಲಾಗುವುದು. ಅರ್ಜಿ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

| ಕ್ರ.ಸಂ. | ವರ್ಗ | ನಿಗದಿತ ಅರ್ಜಿ ಶುಲ್ಕ |
|---|---|---|
| (1) | ಸಾಮಾನ್ಯ ವರ್ಗ/2ಎ/2ಬಿ/3ಎ/3ಬಿ | ₹ 600/- |
| (2) | ಪ.ಜಾ./ ಪ.ಪಂ./ ವರ್ಗ-1/ ಮಾಜಿ ಸೈನಿಕ/ ಅಶಕ್ತ ಮಾಜಿ ಸೈನಿಕರ ಅವಲಂಬಿತರು | ₹ 300/- |

**<u>ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ಆನ್‌ಲೈನ್ ಅರ್ಜಿಯೊಂದಿಗೆ ಪಾವತಿಸತಕ್ಕದ್ದು.</u>**

ಅರ್ಜಿ ಶುಲ್ಕದಲ್ಲಿ ವಿನಾಯಿತಿ ಪಡೆದ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆ ಸಮಯದಲ್ಲಿ ಸೂಕ್ತ ದಾಖಲಾತಿಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಅರ್ಜಿದಾರರನ್ನು ಸಾಮಾನ್ಯ ವರ್ಗದ ಅಭ್ಯರ್ಥಿ ಎಂದು ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗೆ ನಿಗದಿತ ಶುಲ್ಕ ಪಾವತಿಸಿರುವುದಿಲ್ಲವೆಂದು ಪರಿಗಣಿಸಿ ಅಭ್ಯರ್ಥನವನ್ನು ತಿರಸ್ಕರಿಸಲಾಗುವುದು.

ನಿಗದಿತ ಆನ್‌ಲೈನ್ ಪಾವತಿಗೆ ಹೊರತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ಅರ್ಜಿ ಶುಲ್ಕ ಪಾವತಿಗೆ ಅವಕಾಶ ಇರುವುದಿಲ್ಲ ಹಾಗೂ ಒಮ್ಮೆ ಪಾವತಿಸಿದ ಅರ್ಜಿ ಶುಲ್ಕವನ್ನು ಯಾವುದೇ ಕಾರಣಕ್ಕೂ / ಸಂದರ್ಭದಲ್ಲಿಯೂ ಹಿಂತಿರುಗಿಸಲಾಗುವುದಿಲ್ಲ.

ಒಬ್ಬ ಅಭ್ಯರ್ಥಿಯು ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಯಸಿದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿ ಶುಲ್ಕದ ಒಟ್ಟು ಮೊತ್ತವನ್ನು ಪಾವತಿಸಬೇಕು.

XII. **<u>ನೇಮಕಾತಿ ಹಂತಗಳು:</u>**

ಅ) <u>ದೇಹದಾರ್ಢ್ಯತೆ ಮತ್ತು ದಾಖಲಾತಿ ಪರಿಶೀಲನೆ:</u>

ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳು ನಿಗದಿತ ವಿದ್ಯಾರ್ಹತೆ, ದೇಹದಾರ್ಢ್ಯತೆ, ವಯೋಮಿತಿ, ಚಾಲಕ / ನಿರ್ವಾಹಕ ಪರವಾನಿಗೆ ಹಾಗೂ ಚಾಲಕ / ಚಾಲಕ-ಕಂ-ನಿರ್ವಾಹಕ ಹುದ್ದೆಗೆ ನಿಗದಿಪಡಿಸಿದ ಇತರೆ ಅರ್ಹತಾ ಮಾನದಂಡಗಳನ್ನು ಹೊಂದಿರಬೇಕು. ಅರ್ಹತಾ ಮಾನದಂಡಗಳನ್ನು ಪೂರೈಸಿದಲ್ಲಿ ಮಾತ್ರ ಮುಂದಿನ ಹಂತಕ್ಕೆ ಅರ್ಹರಾಗುತ್ತಾರೆ.

ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ವಿವರಗಳ ಆಧಾರದ ಮೇಲೆ ದೇಹದಾರ್ಢ್ಯತೆ ಮತ್ತು ಮೂಲ ದಾಖಲಾತಿಗಳ ಪರಿಶೀಲನೆ ನಡೆಸಲಾಗುತ್ತದೆ. ದೇಹದಾರ್ಢ್ಯತೆ ಮತ್ತು ಮೂಲ ದಾಖಲಾತಿಗಳ ಪರಿಶೀಲನೆ ನಡೆಸಲಾಗುವ ಸ್ಥಳ ಮತ್ತು ಸಲ್ಲಿಸಬೇಕಾದ ದಾಖಲಾತಿಗಳ ವಿವರಗಳನ್ನು ಕರೆ ಪತ್ರದಲ್ಲಿ ತಿಳಿಸಲಾಗುತ್ತದೆ.

ಆ) <u>ಚಾಲನಾ ವೃತ್ತಿ ಪರೀಕ್ಷೆ:</u>

ಮೇಲಿನ ಹಂತವನ್ನು ಯಶಸ್ವಿಯಾಗಿ ಪೂರೈಸುವ ಅಭ್ಯರ್ಥಿಗಳು ಈ ಕೆಳಕಂಡ **<u>ಚಾಲನಾ ಪರೀಕ್ಷಾ ವಿಧಾನದಂತೆ</u>** <u>ಮೊದಲ ಮೂರು</u> ಚಾಲನಾ ವೃತ್ತಿ ಪರೀಕ್ಷೆಗಳಿಗೆ ಹಾಜರಾಗಿ ಆಯಾ ಪರೀಕ್ಷೆಗೆ ನಿಗದಿಪಡಿಸಿದ ಕನಿಷ್ಠ ಅಂಕಗಳೊಂದಿಗೆ ಕಡ್ಡಾಯವಾಗಿ ಉತ್ತೀರ್ಣರಾದಲ್ಲಿ ಮಾತ್ರ ಮುಂದಿನ ಚಾಲನಾ ವೃತ್ತಿ ಪರೀಕ್ಷೆಗೆ ಅರ್ಹರಾಗುತ್ತಾರೆ.

| ಕ್ರ ಸಂ | ಚಾಲನಾ ಪರೀಕ್ಷೆ ವಿಧಾನ | ಎರಡು ಪರೀಕ್ಷೆಗಳ ಗರಿಷ್ಠ ಒಟ್ಟು ಅಂಕಗಳು | ಎರಡು ಪರೀಕ್ಷೆಗಳಿಂದ ಗಳಿಸಬೇಕಾದ ಕನಿಷ್ಠ ಅಂಕಗಳು | ಪ್ರತಿ ಪರೀಕ್ಷೆಗೆ ನಿಗದಿತ ಸಮಯದ ಮಿತಿ |
|---|---|---|---|---|
| 1 | ಬಸ್ಸನ್ನು "ಎಸ್" ರ ಪಥದಲ್ಲಿ ಹಿಂದಕ್ಕೆ ಚಲಿಸುವುದು. (Reverse "S") | 14 | 7 | 3 ನಿಮಿಷ |
| 2 | ಬಸ್ಸನ್ನು ಹಿಮ್ಮುಖ ಚಲಿಸಿ ನಿಲುಗಡೆ ಮಾಡುವುದು. (Reverse "Parking") | 12 | 6 | 1 ನಿಮಿಷ |
| 3 | ಬಸ್ಸನ್ನು ಏರುಗತಿಯಲ್ಲಿ ನಿಲ್ಲಿಸಿ ಮುಂದಕ್ಕೆ ಚಲಿಸುವುದು. (Upgradient) | 10 | 5 | ಮಿತಿ ಇಲ್ಲ |
| 4 | ಬಸ್ಸನ್ನು '8' ರ ಪಥದಲ್ಲಿ ಮುಂದಕ್ಕೆ ಚಲಿಸುವುದು (8 Track) | 10 | ಕನಿಷ್ಟ ಅಂಕ ಮಿತಿ ಇರುವುದಿಲ್ಲ. | 1 ನಿಮಿಷ |
| 5 | ಸಂಚಾರ ಸಂಕೇತಗಳನ್ನು ಗುರುತಿಸುವುದು (Traffic Signals) | 4 | ಕನಿಷ್ಟ ಅಂಕ ಮಿತಿ ಇರುವುದಿಲ್ಲ. | 2 ನಿಮಿಷ |

ಪ್ರತಿ ಚಾಲನಾ ವೃತ್ತಿ ಪರೀಕ್ಷೆಗೆ ಒಳಗಾದ ನಂತರ ಮೇಲಿನ ಕ್ರ.ಸಂ. 1 ರಿಂದ 3 ರ ಕಡ್ಡಾಯ ಪರೀಕ್ಷೆಗಳಲ್ಲಿ ಕನಿಷ್ಟ ಅರ್ಹತಾ ಅಂಕ ಪಡೆದ ನಂತರ ಕ್ರಮ ಸಂಖ್ಯೆ 4 ಮತ್ತು 5 ರ ಪರೀಕ್ಷೆಗಳಿಗೆ ಅವಕಾಶ ನೀಡಲಾಗುವುದು. ಒಟ್ಟಾರೆಯಾಗಿ ನಿಗದಿತ ಗರಿಷ್ಟ 50 ಅಂಕಗಳಿಗೆ ಕನಿಷ್ಠ 25 ಹಾಗೂ ಮೇಲ್ಪಟ್ಟು ಅಂಕಗಳನ್ನು ಗಳಿಸಿದ ಅಭ್ಯರ್ಥಿಗಳನ್ನು ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಉತ್ತೀರ್ಣರೆಂದು ಪರಿಗಣಿಸಲಾಗುವುದು.

ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ದೇಹ ದಾರ್ಢ್ಯತೆ ಪರಿಶೀಲನೆ, ಮೂಲ ದಾಖಲಾತಿ ಪರಿಶೀಲನೆ ಹಾಗೂ ಚಾಲನಾ ವೃತ್ತಿ ಪರೀಕ್ಷೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟಿನಲ್ಲಿ ವಿವರವಾಗಿ ಬಿತ್ತರಿಸಲಾಗುತ್ತದೆ. ಈ ಕುರಿತು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮೂಲಕ ಅಭ್ಯರ್ಥಿಗಳ ಗಮನಕ್ಕೆ ತರಲಾಗುತ್ತದೆ. ಆದಕಾರಣ ಅಭ್ಯರ್ಥಿಗಳು ಕಾಲಕಾಲಕ್ಕೆ ಸಂಸ್ಥೆಯ ವೆಬ್‌ಸೈಟ್ ಮತ್ತು ದಿನ ಪತ್ರಿಕೆಗಳನ್ನು ಗಮನಿಸುವುದು.

XIII. **ತರಬೇತಿ ಅವಧಿ, ಭತ್ಯೆ ಹಾಗೂ ವೇತನ ಶ್ರೇಣಿ:**

ಸಂಸ್ಥೆಯು ಪ್ರಕಟಿಸುವ ಅಂತಿಮ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದು ಆಯ್ಕೆಗೊಂಡ ಅಭ್ಯರ್ಥಿಗಳನ್ನು ಎರಡು ವರ್ಷಗಳ ಕಾಲ ಕೆಲಸದ ಮೇಲಿನ ತರಬೇತಿಗೆ (On Job Training) ನಿಯೋಜಿಸಲಾಗುವುದು. ತರಬೇತಿ ಅವಧಿಯಲ್ಲಿ ಚಾಲಕರಿಗೆ ರೂ 10,000/- ರಂತೆ ಹಾಗೂ ಚಾಲಕ-ಕಂ-ನಿರ್ವಾಹಕರಿಗೆ ರೂ. 9,100/- ರಂತೆ ಮಾಸಿಕ ತರಬೇತಿ ಭತ್ಯೆಯನ್ನು ಪಾವತಿಸಲಾಗುವುದು.

ಎರಡು ವರ್ಷಗಳ ಕೆಲಸದ ಮೇಲಿನ ತರಬೇತಿ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿದ ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕರನ್ನು ನಿಯಮಾನುಸಾರ ಎರಡು ವರ್ಷಗಳ ಅವಧಿಗೆ ಖಾಯಂ ಪೂರ್ವ ಪರೀಕ್ಷಾರ್ಥ ಸೇವೆಯಲ್ಲಿ ನಿಯೋಜಿಸಲಾಗುವುದು. ಖಾಯಂ ಪೂರ್ವ ಪರೀಕ್ಷಾರ್ಥ ಸೇವಾವಧಿಯಲ್ಲಿ ಕಾಲಿಕ ವೇತನ ಶ್ರೇಣಿ ರೂ. 12400-170-12740-250-14240-320-15840-420-16680-530-18270-640-19550 ರಂತೆ ವೇತನ ಹಾಗೂ ಇತರೆ ಭತ್ಯೆಗಳಿಗೆ ಅರ್ಹರಿರುತ್ತಾರೆ.

XIV. **ದಾಖಲಾತಿ ಪರಿಶೀಲನಾ ಸಮಯದಲ್ಲಿ ಹಾಜರುಪಡಿಸಬೇಕಾದ ಮೂಲ ದಾಖಲಾತಿಗಳು:**

1) ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿ.
2) **ಜನ್ಮ ದಿನಾಂಕವನ್ನು ನಮೂದಿಸಿರುವ** ಎಸ್.ಎಸ್.ಎಲ್.ಸಿ. / ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ / ವರ್ಗಾವಣಾ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉಧೃತ ಭಾಗ.

3) **ವಿದ್ಯಾರ್ಹತೆಗೆ** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳ, ಸಿ.ಬಿ.ಎಸ್.ಇ. ಹಾಗೂ ಇತರೆ ರಾಜ್ಯಗಳ ಮಾನ್ಯತೆ ಹೊಂದಿರುವ ಅಧಿಕೃತ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗಳ ಅಂಕಪಟ್ಟಿಗಳನ್ನು ಮಾತ್ರ ಪರಿಗಣಿಸಲಾಗುವುದು.

4) **ಜಾತಿ/ಪ್ರವರ್ಗ ಮೀಸಲಾತಿ ಕೋರಿದ್ದಲ್ಲಿ:** ಸಕ್ಷಮ ಪ್ರಾಧಿಕಾರಗಳಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣಪತ್ರ.

5) **ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ:** ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ.

6) **ಗ್ರಾಮೀಣ ಮೀಸಲಾತಿ ಕೋರಿದ್ದಲ್ಲಿ:** ನಿಗದಿತ ನಮೂನೆಯಲ್ಲಿ ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ.

7) **ಕನ್ನಡ ಮಾಧ್ಯಮ ಮೀಸಲಾತಿ ಕೋರಿದ್ದಲ್ಲಿ:** ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ.

8) **ಯೋಜನಾ ನಿರಾಶ್ರಿತ ಮೀಸಲಾತಿ ಕೋರಿದ್ದಲ್ಲಿ:** ಸಕ್ಷಮ ಪ್ರಾಧಿಕಾರದಿಂದ ಪಡೆದ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ.

9) **ಸ್ಥಳೀಯ ವ್ಯಕ್ತಿ (371–ಜೆ) ಮೀಸಲಾತಿ ಕೋರಿದ್ದಲ್ಲಿ:** ಸಕ್ಷಮ ಪ್ರಾಧಿಕಾರದಿಂದ ಪಡೆದ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿ ಪ್ರಮಾಣ ಪತ್ರ.

10) ಚಾಲಕ ಮತ್ತು ಚಾಲಕ–ಕಂ–ನಿರ್ವಾಹಕ ಎರಡೂ ಹುದ್ದೆಗೂ ಚಾಲ್ತಿಯಲ್ಲಿರುವ ಭಾರೀ ಸಾರಿಗೆ / ಪ್ರಯಾಣಿಕರ / ಸರಕು ಸಾಗಾಣಿಕೆ ವಾಹನ ಚಾಲನಾ ಪರವಾನಿಗೆ ಜೊತೆಗೆ, ಕರ್ನಾಟಕ ಬ್ಯಾಡ್ಜ್.

11) ಚಾಲಕ–ಕಂ–ನಿರ್ವಾಹಕ ಹುದ್ದೆಗೆ ಚಾಲ್ತಿಯಲ್ಲಿರುವ ಎಂ.ವ್ಹಿ. ನಿರ್ವಾಹಕ ಪರವಾನಿಗೆ ಹಾಗೂ ಬ್ಯಾಡ್ಜ್.

12) ಇತ್ತೀಚಿನ ಬಿಳಿ ಬಣ್ಣದ ಹಿನ್ನೆಲೆ ಹೊಂದಿರುವ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು.

13) ಆಧಾರ್ ಕಾರ್ಡ್.

14) **KSRTC, BMTC, NEKRTC ಅಥವಾ NWKRTC ಯಲ್ಲಿ ಸೇವೆಯಲ್ಲಿರುವವರು**: ಸಂಬಂಧಪಟ್ಟ ನೇಮಕ ಪ್ರಾಧಿಕಾರಸ್ಥರಿಂದ ಜಾಹೀರಾತಿನಲ್ಲಿ ಕರೆಯಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಪಡೆದ ನಿರಾಕ್ಷೇಪಣಾ ಹಾಗೂ ಸೇವಾ ಪ್ರಮಾಣ ಪತ್ರ.

**ಅಭ್ಯರ್ಥಿಗಳು ಮೇಲೆ ವಿವರಿಸಿದಂತೆ ಮೂಲ ಅರ್ಜಿಯೊಂದಿಗೆ ವಿದ್ಯಾರ್ಹತೆ, ಚಾಲನಾ & ನಿರ್ವಾಹಕ ಪರವಾನಿಗೆಯ ಹಾಗೂ ಕೋರಿದ ಮೀಸಲಾತಿಗಳ ದಾಖಲೆಗಳ ಹಾಗೂ ಆಧಾರ್ ಕಾರ್ಡ್‌ನ ಒಂದು ಸೆಟ್ ಛಾಯಾಪ್ರತಿಯನ್ನು ಪರಿಶೀಲನಾ ಸಮಯದಲ್ಲಿ ಸಲ್ಲಿಸುವುದು**.

XV. **ಸೂಚನೆಗಳು :–**

1) ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಆನ್‌ಲೈನ್ ಮುಖಾಂತರ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಸೂಚನೆಗಳನ್ನು ಸಂಪೂರ್ಣವಾಗಿ ತಿಳಿದುಕೊಂಡ ನಂತರವೇ ಅರ್ಜಿ ಸಲ್ಲಿಸುವುದು.

2) ವಿದ್ಯಾಭ್ಯಾಸಕ್ಕಾಗಿ / ಶಿಕ್ಷಣಕ್ಕಾಗಿ / ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಎಂದು ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ.

3) ಅಭ್ಯರ್ಥಿಗಳು ಅರ್ಜಿಯಲ್ಲಿ ಕಡ್ಡಾಯವಾಗಿ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿಯಲ್ಲಿರುವಂತೆ ಹೆಸರನ್ನು ದಾಖಲಿಸುವುದು.

4) ದಾಖಲಾತಿ ಪರಿಶೀಲನೆಗೆ ಹಾಗೂ ಚಾಲನಾ ವೃತ್ತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸಂಸ್ಥೆಯಿಂದ ಯಾವುದೇ ಆರ್ಥಿಕ ಮರುಪಾವತಿ ಒದಗಿಸಲಾಗುವುದಿಲ್ಲ.

5) ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಮೊಬೈಲ್ ದೂರವಾಣಿ ಸಂಖ್ಯೆಗೆ ಖಒಖ ಮೂಲಕ ತಿಳಿಸಲಾಗುತ್ತದೆ. ಆದಕಾರಣ ಅಭ್ಯರ್ಥಿಗಳು

ಅರ್ಜಿಯಲ್ಲಿ ನಮೂದಿಸಿದ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಚಾಲನೆಯಲ್ಲಿ ಇಟ್ಟುಕೊಳ್ಳುವುದು. ಮೊಬೈಲ್ ದೂರವಾಣಿ ಅಲಭ್ಯತೆ/ಚಾಲನೆ ಇಲ್ಲದೇ ಇರುವ ಕಾರಣಕ್ಕಾಗಿ ಅಭ್ಯರ್ಥಿಗೆ ಮಾಹಿತಿಯು ತಲುಪದೇ ಅನಾನುಕೂಲ ಉಂಟಾದಲ್ಲಿ ಸಂಸ್ಥೆಯು ಜವಾಬ್ದಾರವಾಗುವುದಿಲ್ಲ. ಈ ಸಂಬಂಧ ಯಾವುದೇ ಮನವಿಯನ್ನು ಪರಿಗಣಿಸಲಾಗುವುದಿಲ್ಲ.

6) ಸಂಸ್ಥೆಯ ನೇಮಕಾತಿ ನಿಯಮಾವಳಿ ಅನುಸಾರ ಅಂಗವಿಕಲರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

7) ಅಭ್ಯರ್ಥಿಗಳು ಆನ್ ಲೈನ್ ಮೂಲಕ ಭರ್ತಿ ಮಾಡಿದ ಅರ್ಜಿಯನ್ನು ತಪ್ಪದೇ ಡೌನ್‌ಲೋಡ್ ಮಾಡಿದ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

8) ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ಭರ್ತಿ ಮಾಡದೇ ಅರ್ಜಿಯು ತಿರಸ್ಕೃತವಾದಲ್ಲಿ ಅಥವಾ ಯಾವುದೇ ಸೌಲಭ್ಯದಿಂದ ಅವರು ವಂಚಿತರಾದಲ್ಲಿ ಅದಕ್ಕೆ ಅಭ್ಯರ್ಥಿಗಳೇ ನೇರ ಜವಾಬ್ದಾರರು.

9) ಅರ್ಜಿಯಲ್ಲಿ ಸುಳ್ಳು ಮಾಹಿತಿ ನೀಡಿ ಅಥವಾ ನಕಲಿ ಪ್ರಮಾಣ ಪತ್ರ / ದಾಖಲಾತಿಗಳನ್ನು ಸಲ್ಲಿಸಿ ನೌಕರಿ ಪಡೆದಿರುವುದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ, ಅವರನ್ನು ಸಂಸ್ಥೆಯ ನಿಯಮಾವಳಿಗಳ ಪ್ರಕಾರ ಯಾವುದೇ ಮುನ್ಸೂಚನೆ ನೀಡದೇ ಯಾವುದೇ ಸಮಯದಲ್ಲಾದರೂ ನೌಕರಿಯಿಂದ ತೆಗೆದು ಹಾಕಲಾಗುವುದು/ವಜಾ ಮಾಡಲಾಗುವುದು. ಜೊತೆಗೆ ಅವರ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು.

10) ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯು ಘೋಷಿಸಿರುವ ಮಾಹಿತಿಗಳೇ ಅಂತಿಮವಾಗಿದ್ದು, ಹೆಚ್ಚಿನ ಮಾಹಿತಿ / ದಾಖಲೆಗಳ ಸಲ್ಲಿಕೆಗೆ ಅವಕಾಶವಿರುವುದಿಲ್ಲ.

11) ಅಭ್ಯರ್ಥಿಯು ಸಲ್ಲಿಸುವ ಪ್ರಮಾಣ ಪತ್ರಗಳಲ್ಲಿ ನಮೂದಾಗಿರುವ ಎಲ್ಲಾ ವಿವರಗಳು ತನ್ನದೇ ಎನ್ನುವ ಬಗ್ಗೆ ಖಾತರಿಪಡಿಸಿಕೊಳ್ಳುವುದು.

12) ಅರ್ಜಿಯಲ್ಲಿ ನೀಡುವ ವಿಳಾಸವೇ ಅಂತಿಮವಾಗಿದ್ದು ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸಂಬಂಧಿಸಿದ ಎಲ್ಲಾ ಪತ್ರ ವ್ಯವಹಾರಗಳನ್ನು ಅರ್ಜಿಯಲ್ಲಿ ನಮೂದಿಸಿದ ವಿಳಾಸಕ್ಕೆ ಮಾಡಲಾಗುವುದು. ನಂತರದಲ್ಲಿ ವಿಳಾಸ ಬದಲಾವಣೆ ಬಗ್ಗೆ ಯಾವುದೇ ಪತ್ರ ವ್ಯವಹಾರಕ್ಕೆ ಆಸ್ಪದವಿರುವುದಿಲ್ಲ.

13) ನೈತಿಕ ದುರ್ನಡತೆಯಿಂದಾಗಿ ಅಥವಾ ನೀತಿ ಬಾಹಿರ ಚಟುವಟಿಕೆಗಳಿಂದಾಗಿ ನ್ಯಾಯಾಲಯದಿಂದ ಶಿಕ್ಷೆಗೊಳಪಟ್ಟಿರುವ ವ್ಯಕ್ತಿ ಅಥವಾ ಈ ಸಂಸ್ಥೆಯಲ್ಲಿ ಅಥವಾ ರಾಜ್ಯ / ಕೇಂದ್ರ / ಸ್ಥಳೀಯ ಸಂಸ್ಥೆ / ಕೈಗಾರಿಕಾ / ವಾಣಿಜ್ಯಕ್ಕೆ ಸಂಬಂಧಪಟ್ಟ ಅಥವಾ ರಾಜ್ಯ ಸಾರಿಗೆ ಅಧೀನದಲ್ಲಿರುವ ಕಛೇರಿಗಳಲ್ಲಿ ನೈತಿಕ ದುರ್ನಡತೆಯಿಂದಾಗಿ / ನೀತಿ ಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾಗಿ ಅಥವಾ ಈ ಹಿಂದೆ ರಾಜ್ಯದ ಒಂದು ಸಾರಿಗೆ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು / ನೀತಿ ಬಾಹಿರ ಚಟುವಟಿಕೆಗಳಲ್ಲಿ ತೊಡಗಿ ಸೇವೆಯಿಂದ ತೆಗೆದು ಹಾಕಿದ್ದಲ್ಲಿ / ವಜಾ ಮಾಡಲ್ಪಟ್ಟಿದ್ದಲ್ಲಿ / ಕಾನೂನು ಬಾಹಿರವಾಗಿ ಬಹು ಪತ್ನಿತ್ವ/ಪತಿತ್ವ ಹೊಂದಿರುವ, ಇತ್ಯಾದಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅನರ್ಹರಾಗಿರುತ್ತಾರೆ.

14) ಯಾವುದೇ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಅರ್ಹತೆಯನ್ನು (Criteria) ಸರಿಯಾಗಿ ತಿಳಿದುಕೊಂಡು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

15) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡದೇ ಇದ್ದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳು ಸಂಸ್ಥೆಯ ವತಿಯಿಂದ ನಡೆಸಲ್ಪಡುವ ಕನ್ನಡ ಭಾಷಾ ಜ್ಞಾನದ ಪರೀಕ್ಷೆಯಲ್ಲಿ ಒಂದೇ ಅವಕಾಶದಲ್ಲಿ ಉತ್ತೀರ್ಣರಾಗಬೇಕು ಇಲ್ಲದಿದ್ದಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

16) ಕನ್ನಡ ಭಾಷಾ ಜ್ಞಾನವನ್ನು ಹೊಂದುವಿಕೆಯಿಂದ ಈ ಕೆಳಕಂಡವರಿಗೆ ವಿನಾಯ್ತಿ ನೀಡಲಾಗಿದೆ.
   A. ಮಾಜಿ ಸೈನಿಕರು ಮತ್ತು ಅವರ ಮಕ್ಕಳು.
   B. ಕೇಂದ್ರ ಸರ್ಕಾರದ ನೌಕರರ ಮಕ್ಕಳು.

C. ರಾಜ್ಯದ ಹೊರಗಡೆ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರದ ನೌಕರರು.

D. ಕರ್ನಾಟಕ ರಾಜ್ಯದೊಳಗೆ ಸಾರ್ವಜನಿಕ ಉದ್ದಿಮೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಮಕ್ಕಳು.

ಸದರಿ ವಿನಾಯಿತಿಗೆ ಸೂಕ್ತ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಅಂತಹ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು.

17) ನೇಮಕಾತಿಯಾಗಿ ಸೇವೆಯಲ್ಲಿ ಖಾಯಂಗೊಳ್ಳುವ ಅಭ್ಯರ್ಥಿಗಳು ಉಪದಾನ ಪಾವತಿ ಕಾಯ್ದೆ 1972 ರನ್ವಯ ಉಪದಾನ ಪಡೆಯಲು ಅರ್ಹರಿರುತ್ತಾರೆ. ಮುಕ್ತ ವೇತನ ಶ್ರೇಣಿಗೆ ಅರ್ಹರಾಗಿರುವುದಿಲ್ಲ.

18) ಅಭ್ಯರ್ಥಿಯು ತನ್ನ ಆಯ್ಕೆಗಾಗಿ ಯಾವುದೇ ವಿಧವಾದ ಪ್ರಚಾರ ಮಾಡುವ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಲ್ಲಿ ಯಾವ ಮುನ್ಸೂಚನೆ ನೀಡದೇ ಅವರನ್ನು ಅನರ್ಹಗೊಳಿಸಲಾಗುವುದು.

19) ಅಭ್ಯರ್ಥಿಯು ಸಾರ್ವಜನಿಕ ಉದ್ದಿಮೆ ಅಥವಾ ಕರ್ನಾಟಕ ಸರ್ಕಾರ ಅಥವಾ ಕೇಂದ್ರ ಸರ್ಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಲ್ಲಿ ಅಂತಹ ಅಭ್ಯರ್ಥಿಯು ಸೂಕ್ತ ಪ್ರಾಧಿಕಾರಸ್ಥರಿಂದ ಈ ಸಂಸ್ಥೆಗೆ ಅರ್ಜಿ ಸಲ್ಲಿಸಲು ಆಕ್ಷೇಪಣೆ ಇಲ್ಲವೆಂಬ ಬಗ್ಗೆ ನಿರಾಕ್ಷೇಪಣಾ ಪತ್ರವನ್ನು ಹಾಜರುಪಡಿಸತಕ್ಕದ್ದು.

20) ನೇಮಕಾತಿಯ ವಿವಿಧ ಹಂತಕ್ಕೆ ಸಂಬಂಧಪಟ್ಟ ಎಲ್ಲಾ ವಿವರಗಳನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಆದ್ದರಿಂದ, ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಅಭ್ಯರ್ಥಿಗಳು ಯಾವುದೇ ರೀತಿಯ ಪತ್ರ ವ್ಯವಹಾರ ಅಥವಾ ವಿಚಾರಣೆಗಳಿಗೆ ಆಸ್ಪದವಿರುವುದಿಲ್ಲ.

21) ಅಭ್ಯರ್ಥಿಗಳ ಅರ್ಹತೆ ಮತ್ತು ಆಯ್ಕೆಯ ವಿಷಯದಲ್ಲಿ ಈ.ಕ.ರ.ಸಾ.ಸಂಸ್ಥೆಯ ಆಯ್ಕೆ ಸಮಿತಿಯ / ಸಕ್ಷಮ ಪ್ರಾಧಿಕಾರಿಗಳ ನಿರ್ಧಾರವೇ ಅಂತಿಮವಾಗಿರುತ್ತದೆ.

22) ಈ ಜಾಹೀರಾತಿನನ್ವಯ ನೇಮಕಗೊಂಡ ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕರನ್ನು ವೃತ್ತಿ ತರಬೇತಿ ಮೇಲೆ ಮತ್ತು ಅವರ ಸೇವಾವಧಿಯಲ್ಲಿ ಈಕರಸಾ ಸಂಸ್ಥೆಯ ಯಾವುದೇ ವಿಭಾಗಗಳಿಗೆ ನಿಯೋಜಿಸಲಾಗುತ್ತದೆ.

23) ಚಾಲಕ ಮತ್ತು ಚಾಲಕ-ಕಂ-ನಿರ್ವಾಹಕ ಎರಡೂ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಎರಡೂ ಹುದ್ದೆಗಳಿಗೆ ಮೆರಿಟ್ ಆಧಾರದಲ್ಲಿ ಆಯ್ಕೆಗೆ ಅರ್ಹರಾದಲ್ಲಿ ಅವರು ಅರ್ಜಿಯಲ್ಲಿ ನೀಡಿದ ಅದ್ಯತೆ ಹುದ್ದೆಯ ಆಯ್ಕೆಗೆ ಮಾತ್ರ ಪರಿಗಣಿಸಲಾಗುತ್ತದೆ. ಆದ್ಯತೆಗನುಸಾರ ಆಯ್ಕೆಗೊಂಡ ಹುದ್ದೆಯ ಬದಲಾವಣೆಗೆ ಅವಕಾಶ ಇರುವುದಿಲ್ಲ.

24) ನೇಮಕಾತಿಗೆ ಆಯ್ಕೆಯಾದ ಅಭ್ಯರ್ಥಿಗಳು ಈ.ಕ.ರ.ಸಾ.ಸಂಸ್ಥೆಯಿಂದ ರಾಜ್ಯದ ಇತರೆ ಸಾರಿಗೆ ಸಂಸ್ಥೆಗಳಾದ KSRTC, BMTC ಅಥವಾ NWKRTC ಗೆ ವರ್ಗಾವಣೆ ಹೊಂದಲು ಅವಕಾಶಗಳಿರುವುದಿಲ್ಲ.

**<u>ವಿಶೇಷ ಸೂಚನೆ:</u> ಮೂಲ ದಾಖಲಾತಿಗಳ ಪರಿಶೀಲನೆಯಲ್ಲಿ ಅರ್ಹರಾದ ಅಭ್ಯರ್ಥಿಗಳನ್ನು ಗಣಕೀಕೃತ ಪದ್ಧತಿಯಲ್ಲಿ ನಡೆಸಲ್ಪಡುವ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಸರ್ಕಾರ ನಿಗದಿಪಡಿಸಿರುವ ಮೀಸಲಾತಿಗನುಸಾರವಾಗಿ ಆಯ್ಕೆಯನ್ನು ಪಾರದರ್ಶಕವಾಗಿ ಮಾಡಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಮಧ್ಯವರ್ತಿಗಳ ಅಥವಾ ಯಾವುದೇ ತರಹದ ಆಮಿಷಕ್ಕೆ ಒಳಗಾಗಬಾರದು.**

**ವಿಚಾರಣೆಗಾಗಿ ಸ್ಥಿರ ದೂರವಾಣಿ ಸಂಖ್ಯೆ 08472-227687 ಗೆ ಕಚೇರಿ ಕೆಲಸದ ದಿನಗಳಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

3/1

ವ್ಯವಸ್ಥಾಪಕ ನಿರ್ದೇಶಕರು

**<u>ಪ್ರತಿಯನ್ನು ಗೌರವ ಪೂರ್ವಕವಾಗಿ :-</u>**

1) ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ಮುಖ್ಯ ಮಂತ್ರಿಯವರ ಸಚಿವಾಲಯ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.

2) ಮಾನ್ಯ ಉಪ ಮುಖ್ಯಮಂತ್ರಿಗಳು, ಸಾರಿಗೆ ಸಚಿವರು ಹಾಗೂ ಅಧ್ಯಕ್ಷರು, ಈ.ಕ.ರ.ಸಾ.ಸಂಸ್ಥೆ ರವರ ಆಪ್ತ ಕಾರ್ಯದರ್ಶಿ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರ ಕಾರ್ಯಾಲಯ, ಸಾರಿಗೆ

ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸುತ್ತಾ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.

3) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ.

4) ವ್ಯವಸ್ಥಾಪಕ ನಿರ್ದೇಶಕರು, KSRTC, BMTC & NWKRTC ರವರ ಮಾಹಿತಿಗಾಗಿ.

3/1

ವ್ಯವಸ್ಥಾಪಕ ನಿರ್ದೇಶಕರು

**ಪ್ರತಿಯನ್ನು :-**

- ✓ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 4ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ.
- ✓ ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಸುಬ್ಬಯ್ಯ ರಸ್ತೆ, ಬೆಂಗಳೂರು-27 ರವರ ಮಾಹಿತಿಗಾಗಿ.
- ✓ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಕೇಂದ್ರ, 9/1, ಶ್ರೀ ಪ್ರಶಾಂತ ಕಾಂಪ್ಲೆಕ್ಸ್, ಪಿ ಕಾಳಿಂಗರಾವ್ ರಸ್ತೆ, ಬೆಂಗಳೂರು ರವರ ಮಾಹಿತಿಗಾಗಿ.
  - ✓ ಉಪ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ ವಸತಿ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
  - ✓ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರ ರವರ ಮಾಹಿತಿಗಾಗಿ.
  - ✓ ಜಂಟಿ ಕಾರ್ಯದರ್ಶಿಗಳು, ಹೈದ್ರಾಬಾದ-ಕರ್ನಾಟಕ ವಿಶೇಷ ಕೋಶ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರ ಮಾಹಿತಿಗಾಗಿ.
  - ✓ ಜಿಲ್ಲಾ ಉದ್ಯೋಗಾಧಿಕಾರಿ / ಉದ್ಯೋಗ ಅಧಿಕಾರಿಗಳು ಕಲಬುರಗಿ / ಬೀದರ / ರಾಯಚೂರು / ಯಾದಗಿರಿ / ಬಳ್ಳಾರಿ / ಕೊಪ್ಪಳ / ವಿಜಯಪುರ ರವರ ಮಾಹಿತಿಗಾಗಿ ಕಳುಹಿಸಲಾಗಿದೆ. ಜಾಹೀರಾತಿನ ಪ್ರತಿಯನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಲು ಹಾಗೂ ತಮ್ಮಿಂದ ನೊಂದಾಯಿಸಲ್ಪಟ್ಟಿರುವ ಅರ್ಹ ಅಭ್ಯರ್ಥಿಗಳಿಗೆ ಜಾಹೀರಾತಿನಂತೆ ನಿಗದಿತ ಕೊನೆಯ ದಿನಾಂಕದೊಳಗೆ ಅರ್ಜಿ ಸಲ್ಲಿಸಲು ಸೂಚನೆ ನೀಡುವಂತೆ ಕೋರಲಾಗಿದೆ.
  - ✓ ಸಹಾಯಕ ನಿರ್ದೇಶಕರು, ಉದ್ಯೋಗ ವಿನಿಮಯ ಕಛೇರಿ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಅಧಿನಿಯಮ ಜಾರಿ ಘಟಕ) ಸರ್ಕಾರಿ ಕೈಗಾರಿಕೆ ತರಬೇತಿ ಕೇಂದ್ರದ ಹಿಂಭಾಗ, ಎಂ.ಎಸ್.ಕೆ ಮಿಲ್ ರಸ್ತೆ ಕಲಬುರಗಿ ರವರ ಮಾಹಿತಿಗಾಗಿ.
  - ✓ ಸಹಾಯಕ ನಿರ್ದೇಶಕರು, ಉದ್ಯೋಗ ವಿನಿಮಯ ಕಛೇರಿ (ಖಾಲಿ ಹುದ್ದೆಗಳ ಕಡ್ಡಾಯ ಅಧಿಸೂಚನೆ ಅಧಿನಿಯಮ ಜಾರಿ ಘಟಕ) ಸರ್ಕಾರಿ ಕೈಗಾರಿಕೆ ತರಬೇತಿ ಕೇಂದ್ರದ ಹಿಂಭಾಗ, ಎಂ.ಎಸ್.ಕೆ.ಮಿಲ್. ರಸ್ತೆ ಕಲಬುರಗಿ. ರವರ ಮಾಹಿತಿಗಾಗಿ.
  - ✓ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ / ವಾ.ಕ.ರ.ಸಾ.ಸಂಸ್ಥೆ / ಬೆಂ.ಮ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
  - ✓ ನಿರ್ದೇಶಕರು(ಸಿ&ಪ), ನಿರ್ದೇಶಕರು (ಭ & ಜಾ), ಕ.ರಾ.ರ.ಸಾ.ನಿಗಮ ರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
  - ✓ ಎಲ್ಲಾ ಇಲಾಖಾ ಮುಖ್ಯಸ್ಥರು, ಈ.ಕ.ರ.ಸಾ.ಸಂಸ್ಥೆ, ರವರ ಮಾಹಿತಿಗಾಗಿ.
  - ✓ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು, ಈ.ಕ.ರ.ಸಾ.ಸಂಸ್ಥೆ ರವರ ಮಾಹಿತಿಗಾಗಿ ಹಾಗೂ ಕಾರ್ಮಿಕರ ಮತ್ತು ಸಾರ್ವಜನಿಕರ ಗಮನಕ್ಕಾಗಿ ಜಾಹೀರಾತು ಪ್ರತಿಯನ್ನು ವಿಭಾಗೀಯ ಕಛೇರಿ, ಪ್ರಾದೇಶಿಕ ಕಾರ್ಯಾಗಾರ, ಘಟಕ ಮತ್ತು ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು.

3/1/2020

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು